ಶ್ರೀ ಕೆ.ಜಿ.ಬೋಪಯ್ಯ: ಈಗ ಸುಪ್ರೀಂ ಕೋರ್ಟ ಜಡ್ಜ್ ಮೆಂಟ್ ಯಾವಾಗ ಆಗಿದ್ದು? ಈ ಸುತ್ತೋಲೆ ಹೊರಡಿಸಿದ್ದು ಯಾವಾಗ? ಸುಪ್ರೀ ಕೋರ್ಟಿನ ಆದೇಶಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ದಿನೇಶ್ ಗುಂಡೂರಾವ್: ಜಮ್ಮಾ ಬಾಣೆ ಸರ್ಕಾರದ್ದು ಅಲ್ಲ.

ಶ್ರೀ ಹೆಚ್.ಡಿ.ಬಸವರಾಜ್:– ನೀವು ಇಲ್ಲದೇ ಇರುವುದನ್ನು ಸುಪ್ರೀಕೋರ್ಟಿಗೆ ಏಕೆ ಕಳುಹಿಸುತ್ತೀರಿ?

ಅಧ್ಯಕ್ಷರು: ರೀ ಕೂಡಿ.

ಶ್ರೀ ಹೆಚ್.ಡಿ.ಬಸವರಾಜ್:– ಇದು ಸರ್ಕಾರಿ ಜಮೀನಲ್ಲ ಸಾರ್.

ಅಧ್ಯಕ್ಷರು: ಈಗ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರು ಹೇಳುತ್ತಿದ್ದರು. ನೀವ್ಯಾಕೆ ಮಾನ್ಯ ಚೆನ್ನಿಗಪ್ಪನವರನ್ನು ಕರೆದಿರಿ?

ಅಧ್ಯಕ್ಷರು: ನಾನು ಹೇಳಿದ್ದೇನೆ,ಇದರಿಂದ ತೃಪ್ತರಾಗದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಸಹ ಬಂದಾಗ ಪ್ರಸ್ತಾಪ ಮಾಡಿ. ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ ಮೇಲೂ ಏಕೆ ಈ ತರಹ ಮಾಡುತ್ತಿದ್ದೀರಿ? ನಿಮ್ಮ ಸಮಸ್ಯೆ ನಿವಾರಣೆ ಆಗಬೇಕು. ಸುಮ್ಮನೇ ದಯಮಾಡಿ ಸಮಯ ಹಾಳು ಮಾಡಬೇಡಿ. ಆಯಿತು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಬರಲಿ. ಈಗ ಒಂದು ಪ್ರಕಟಣೆ ಇದೆ.

3.ಪ್ರಕಟಣೆ:–

ವಿಷಯ: 2007ನೇ ಸಾಲಿನ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ) ವಿಧೇಯಕ ಮತ್ತು ಇತರೆ ವಿಧೇಯಕಗಳನ್ನು ವಿಧಾನ ಪರಿಷತ್ತು ಅಂಗೀಕರಿಸುವುದರ ಬಗ್ಗೆ.

ಅಧ್ಯಕ್ಷರು: ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯಿಂದ ಬಂದಿರುವ ಸಂದೇಶದಲ್ಲಿ ದಿನಾಂಕ 06.08.2007ರಂದು ಕರ್ನಾಟಕ ವಿಧಾನ ಪರಷತ್ತಿನ ಕಾರ್ಯ ವಿಧಾನ ಮತ್ತು ನಡುವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2007ನೇ ಸಾಲಿನ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕ

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ

3. ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ

ಅಧ್ಯಕ್ಷರು: ಸಾರ್, ಈಗ ನೀವು ಉತ್ತರ ಕೊಡುತ್ತೀರಾ? ಆಮೇಲೆ ಕೊಡುತ್ತೀರಾ?

ಶ್ರೀ ಎನ್.ಧರ್ಮಸಿಂಗ್: ಆಮೇಲೆ ಏಕೆ? ಇವತ್ತೇ ಕೊಡಲಿ.ಮತ್ತೆ ಆಮೇಲೆ ಅಂದರೆ ನಾಳೇನೂ ಇದೆ.

ಶ್ರೀ ಮಹದೇವ್; ಸಾರ್,ಮೈಸೂರು ಯೂನಿವರ್ಸಿಟಿಯದು ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಸ್ವಲ್ಪ ತಡೆಯಿರಿ ಸ್ವಾಮಿ. ಆಮೇಲೆ ಅವಕಾಶ ಕೊಡುತ್ತೇನೆ. ಇದಾಗಲಿ.

ಶ್ರೀ ಮಹದೇವ್; 15 ದಿವಸದಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು: ಕೊಡುತ್ತೇನೆ ತಡೆಯಿರಿ, ಸಾರ್ ಈಗ ನೀವು ಉತ್ತರ

ಡಾ॥ ಹೆಚ್.ಸಿ.ಮಹದೇವಪ್ಪ: ಸಾರ್, ಈಗ ಇದು ಚರ್ಚೆ ಆಗಿದೆ, ಉತ್ತರ ಕೊಡಿಸಿ.

ಅಧ್ಯಕ್ಷರು: ಸಾರ್, ಮಾನ್ಯ ಯಡಿಯೂರಪ್ಪನವರೇ, ತಾವು ಉತ್ತರ ಕೊಡುತ್ತೀರಾ ಅಥವಾ ಅವರು ಚರ್ಚೆ ಪ್ರಾರಂಭ ಮಾಡಲೋ?

ಶ್ರೀ ದಿನೇಶ್ ಗುಂಡುರಾವ್: ಡಾ: ನಂಜುಡಪ್ಪನವರ ವರದಿ ಬಗ್ಗೆ ಚರ್ಚೆ ಆಗಿದೆ, ಉತ್ತರ ಬರಬೇಕಾಗಿದೆ.

ಡಾ॥ ಹೆಚ್.ಸಿ.ಮಹದೇವಪ್ಪ: ಸಾರ್, ಗ್ರಾಸ್ ವಯಿಲೇಷನ್ ಆಗಿದೆ.

ಅಧ್ಯಕ್ಷರು: ತಡೆಯಿರಿ ಅವಕಾಶ ಕೊಡುತ್ತೇನೆ.

ಡಾ॥ ಹೆಚ್.ಸಿ.ಮಹದೇವಪ್ಪ: ಆದ್ದರಿಂದ ತಾವು ಅವಕಾಶ ಕೊಡಬೇಕು ಸಾರ್.

ಅಧ್ಯಕ್ಷರು: ಮಾನ್ಯ ಶಿವಕುಮಾರ್, ತಾವು ನಿಯಮ 69ರ ಮೇರೆಗೆ ಮಾತನಾಡಿ, ಅವರು ಆಮೇಲೆ ಉತ್ತರ ಕೊಡುತ್ತಾರೆ.